ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ ಅಂಕೋಲಾ
ಸಿಸಿ ನಂಬರ. 557/2023

ಸಿ ಡಬ್ಲ್ಯೂ-1
ಪಿ ಡಬ್ಲ್ಯೂ- 1

ದಿಃ 13-06-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಸಾಕ್ಷಿಯ ಹೆಸರುಃ ಸುಜೀತ್ ಗಾಂವಕರ
ತಂದೆಯ ಹೆಸರುಃ ದೇವಿದಾಸ
ವಯಸ್ಸುಃ 35 ವರ್ಷ
ಉದ್ಯೋಗಃ ಖಾಸಗಿ ಕೆಲಸ
ವಿಳಾಸಃ ಬಾವಿಕೇರಿ, ಅಂಕೋಲಾ.

ಮುಖ್ಯ ವಿಚಾರಣೆಃ ಮಾನ್ಯ ಎ ಪಿ ಪಿ ರವರಿಂದಃ

ದಿಃ12-04-2023 ರಂದು ರಾತ್ರಿ ಸುಮಾರು 8 ಗಂಟೆಯ ಸಮಯದಲ್ಲಿ ನನ್ನ 3 ತಿಂಗಳ ಗರ್ಭಿಣಿ ಹೆಂಡತಿಯನ್ನು ವಾಕಿಂಗ್ ಎಂದು ಆಲದ ಮರದ ಸ್ಟಾಪ್ ನಿಂದ ನಾಗರಕಟ್ಟೆಯ ದೇವಸ್ಥಾನದ ಕಡೆಗೆ ಪ್ರತಿದಿನ ಹೋಗುತ್ತಿದ್ದೇವು. ನಾವು ಆ ದಿನ ಎಡಬದಿಯಲ್ಲಿ ಕಚ್ಚಾ ರಸ್ತೆಯ ಮೇಲೆ ನಡೆದುಕೊಂಡು ಹೋಗುತ್ತಿದ್ದೇವು. ಆಗ ಬಾಲಚಂದ್ರ ನಾಯಕ ಇವರ ಮನೆಯ ಮುಂದೆ ಹಾಯ್ದು ಹೋಗುತ್ತಿರುವಾಗ ಆಟೋ ರಿಕ್ಷಾದ ಚಾಲಕನು ಬೆಲೆಕೇರಿಯಿಂದ ಅಂಕೋಲಾ ಕಡೆಗೆ ಅತಿ ವೇಗದಿಂದ ಮತ್ತು ನಿಷ್ಕಾಳಜಿತನದಿಂದ ವೇಗವನ್ನು ನಿಯಂತ್ರಣ ಮಾಡಲಾಗದೆ ಕಚ್ಚಾ ರಸ್ತೆಯಲ್ಲಿ ಹೋಗುತ್ತಿದ್ದ

ನನ್ನ ಹೆಂಡತಿಗೆ ಬಂದು ಡಿಕ್ಕಿ ಹೊಡೆದಿರುತ್ತಾನೆ. ಡಿಕ್ಕಿ ಹೋಡೆದ ರಭಸಕ್ಕೆ ನನ್ನ ಹೆಂಡತಿ ಹಾರಿ ಬಿದ್ದಿರುತ್ತಾಳೆ. ಆಟೋ ಚಾಲಕನು ಪ್ರತಿದಿನ ನಮ್ಮ ಏರಿಯಾದಲ್ಲಿಯೇ ಓಡಾಡುತ್ತಿದ್ದ, ಆ ದಿನ ನಿಲ್ಲಿಸಲು ಹೇಳಿದರೂ ಸಹ ನಿಲ್ಲಿಸದೆ ಹಾಗೆ ಚಲಾಯಿಸಿಕೊಂಡು ಹೋಗಿರುತ್ತಾನೆ.

2. ನಂತರ ನನ್ನ ಹೆಂಡತಿಯನ್ನು ಎಬ್ಬಿಸಲು ನೋಡಿದಾಗ ಯಾವುದೇ ಚಲನವಲನ ಇರುವುದಿಲ್ಲ. ನನ್ನ ಹೆಂಡತಿಯ ತಲೆಯ ಹಿಂದೆ ಬಲಗಡೆ ರಕ್ತದ ಗಾಯವಾಗಿದ್ದು, ಮೂಗಿನಿಂದ ರಕ್ತ ಬರುತ್ತಿತ್ತು. ಮೈಕೈಗೆ ಸಣ್ಣಪುಟ್ಟ ಗಾಯವಾಗಿತ್ತು. ಅಲ್ಲಿ ಸೇರಿದ ಜನರ ಸಹಾಯದಿಂದ ಖಾಸಗಿ ವಾಹನದಲ್ಲಿ ಆರ್ಯಾ ಆಸ್ಪತ್ರೆಗೆ ಕರೆದುಕೊಂಡು ಬಂದಿರುತ್ತೇವೆ. ಅಲ್ಲಿ ವೈದ್ಯರು ಪರೀಕ್ಷೆ ಮಾಡಿದಾಗ ಆಗಲೇ ಜೀವ ಹೋಗಿರುತ್ತದೆ ಎಂದು ಹೇಳಿರುತ್ತಾರೆ.

3. ನಂತರ ಅಂಕೋಲಾ ಸರಕಾರಿ ಆಸ್ಪತ್ರೆಯ ಶವಾಗಾರದಲ್ಲಿ ಹೋಗಿರುತ್ತೇವೆ. ಅದೇ ದಿನ ರಾತ್ರಿ 11 ಗಂಟೆಯ ಸಮಯದಲ್ಲಿ ಪೋಲೀಸ್ ಠಾಣೆಗೆ ಬಂದು ದೂರನ್ನು ಕೊಟ್ಟಿರುತ್ತೇನೆ. ದೂರಿನ ಮೇಲಿರುವ ಸಹಿಯನ್ನು ಸಾಕ್ಷಿಯು ಗುರುತಿಸಿದ್ದು, ದೂರನ್ನು ನಿಪಿ-1 ಮತ್ತು ಅದರ ಮೇಲಿರುವ ಸಾಕ್ಷಿಯ ಸಹಿಯನ್ನು ನಿಪಿ-1 ಎ ಎಂದು ಗುರುತಿಸಲಾಯಿತು.

4. ಅದೇ ದಿನ ಶವಾಗಾರದಲ್ಲಿ ಪೊಟೋವನ್ನು ತೆಗೆದಿರುತ್ತಾರೆ. ಸಾಕ್ಷಿಯು ಪೋಟೋವನ್ನು ಗುರುತಿಸಿದ್ದು, ಪೊಟೋವನ್ನು ನಿಪಿ-2 ಎಂದು ಗುರುತಿಸಲಾಯಿತು.

ನಂತರ  ಮರುದಿನ ಪೋಸ್ಟ ಮಾಟಮ್ ಮುಗಿಸಿ ಬಂದು, ಶವವನ್ನು ತೆಗೆದುಕೊಂಡು ಹೋಗಿ ಬೆಳಿಗ್ಗೆ 9 ಗಂಟೆಯ ಒಳಗೆ ಎಲ್ಲ ಕ್ರಿಯೆಯನ್ನು ಮುಗಿಸಿರುತ್ತೇವೆ.  ನಂತರ ಪೊಲೀಸರು ಇಬ್ಬರು ನಾಗರೀಕರನ್ನು ಕರೆದುಕೊಂಡು ಬಂದು ಅವರು ಈಗ ನೀವು ದುಃಖದಲ್ಲಿ ಇರುತ್ತೀರಿ ಎಂದು ಗೊತ್ತಿದ್ದು, ಆದರೂ ಸಹ ನೀವು ಸ್ಥಳವನ್ನು ತೋರಿಸಬೇಕು ಎಂದು ಹೇಳಿರುತ್ತಾರೆ. ಅದರಂತೆ ಬೆಳಿಗ್ಗೆ 11 ರಿಂದ 12.15 ಗಂಟೆಯವರೆಗೆ  ನಾನು ತೋರಿಸಿದ ಘಟನಾ ಸ್ಥಳದ ಪಂಚನಾಮೆಯನ್ನು ಬರೆದು, ನಕಾಶೆಯನ್ನು ತಯಾರಿಸಿ, ನನ್ನ ಸಹಿಗಳನ್ನು ಪಡೆದುಕೊಂಡಿರುತ್ತಾರೆ.  ಪೊಟೋಗಳನ್ನು ತೆಗೆದಿರುತ್ತಾರೆ.  ಸಾಕ್ಷಿಯು ಅಪಘಾತ ಸ್ಥಳದ ಪಂಚನಾಮೆ ಹಾಗೂ ಪೊಟೊವನ್ನು  ಗುರುತಿಸಿದ್ದು, ಪಂಚನಾಮೆಯನ್ನು ನಿಪಿ-3 ಮತ್ತು ನಕಾಶೆ ನಿಪಿ-4 ಎಂದು ಗುರುತಿಸಲಾಯಿತು. ಘಟನಾ ಸ್ಥಳದ ಪಂಚನಾಮೆಯ ಮೇಲಿರುವ  ಸಹಿಯನ್ನು ನಿಪಿ-3 ಎ  ಎಂದು ಗುರುತಿಸಲಾಯಿತು. ಸಾಕ್ಷಿಯು ಪೊಟೋಗಳನ್ನು ಗುರುತಿಸಿದ್ದು, ಪೊಟೋಗಳನ್ನು ನಿಪಿ-5 ರಿಂದ 8 ಎಂದು ಗುರುತಿಸಲಾಯಿತು.

5. ದಿಃ15-04-2023 ರಂದು  ಆರೋಪಿಯನ್ನು ಗುರುತಿಸುವ ಸಲುವಾಗಿ ಪೊಲೀಸ್ ಠಾಣೆಗೆ ಬರಲು  ತಿಳಿಸಿದ್ದರು.  ನಾನು 1 ನೇ  ಆರೋಪಿಯಾದ ರವಿ ನಾಯಕ ಇವರನ್ನು ಗುರುತಿಸಿರುತ್ತೇನೆ. ಆತನನ್ನು ಗುರುತಿಸಲು ಹೋದಾಗ ಆತನ ಪೂರ್ಣ ಹೆಸರು ರವಿ ದಾಯಾನಂದ ನಾಯಕ ಎಂದು ಗೊತ್ತಾಗಿರುತ್ತದೆ.  ಅದೇ ರೀತಿ ಮರು ಹೇಳಿಕೆಯನ್ನು

ಕೊಟ್ಟಿರುತ್ತೇನೆ. ನ್ಯಾಯಾಲಯದ ಮುಂದೆ ಇರುವ 1 ನೇ ಆರೋಪಿಯನ್ನು ಸಾಕ್ಷಿಯು ಗುರುತಿಸುತ್ತಾರೆ. ನಾನು ಆ ದಿನ 1 ನೇ ಆರೋಪಿಯು ಆಟೋವನ್ನು ಚಾಲನೆ ಮಾಡಿದ್ದನ್ನು ನೋಡಿರುತ್ತೇನೆ. ಆಟೋ ಸಂಖ್ಯೆ: ಕೆ ಎ 30–ಎ 5087 ಆಗಿರುತ್ತದೆ.

ಪಾಟೀ ಸವಾಲನ್ನು ವಿನಂತಿ ಮೇರೆಗೆ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ).

ಓ ಹೇ ಕೇ ಸರಿ ಇದೆ

ಹೆಚ್ಚುವರಿ ಜೆ.ಎಂ.ಎಫ್.ಸಿ., ಅಂಕೋಲಾ.